ನಳಿಕೆಯ ಹೊಗೆಯನ್ನು ಉಫ್ ಎಂದು ಆರಿಸುವ ಬಾಂಡ್, ಜೇಮ್ಸ್ ಬಾಂಡಿನ ತರ ಇತ್ತು. ಅಪ್ಪನ ಈ ಜರ್ಬಿಗೆ ರಾಘವಾಚಾರಿ ಕೂಡ ಕೊಂಚ ಬೆಪ್ಪಾಗಿದ್ದ.

ಪ್ರತಿಯೊಂದಕ್ಕೂ ಕೈಬರಹದಲ್ಲಿ ದಾಖಲೆಯನ್ನಿರಿಸುವುದು ನಮ್ಮಪ್ಪನಿಗೆ ಒಂದು ವ್ಯಸನವಾಗಿತ್ತು. ಅವರ ಬಳಿ ಒಂದು ಡೈರಿಯಿತ್ತು. ಡೈರಿಯೆಂದರೆ ಒಂದು ಪುಸ್ತಕ. ಅದರಲ್ಲಿ ಅಪ್ಪ ದಿನಚರಿ ಯಾವತ್ತೂ ಬರೆದಿರಲಿಲ್ಲ. ಅದು ಲೆಕ್ಕ, ವಿಳಾಸಗಳನ್ನು ಬರೆದಿಟ್ಟುಕೊಳ್ಳುವ ಪುಸ್ತಕ. ಸಿಕ್ಕಸಿಕ್ಕವರ ವಿಳಾಸಗಳು, ಸಣ್ಣ ಸಣ್ಣ ಖರ್ಚುಗಳು ಎಲ್ಲವೂ ಅವರ 'ಡೈರಿ'ಯಲ್ಲಿ ದಾಖಲಾದರೆ, ಸಣ್ಣ ಸಣ್ಣ ರಸೀತಿಗಳು, ಸಣ್ಣ ಪುಟ್ಟ ಬಿಸಿನೆಸ್ ಕಾರ್ಡುಗಳು ಇಡೀ ಪುಸ್ತಕದ ತುಂಬಾ ಬಿಡಿಬಿಡಿಯಾಗಿ ತುಂಬಿದ್ದವು.

ನಾನು ಏಳನೆಯ ಅಥವಾ ಎಂಟನೆಯ ತರಗತಿಯಲ್ಲಿರುವಾಗ ನಾವು ನಾಗಮಂಗಲದಲ್ಲಿದ್ದೆವು. ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಸ್ವಲ್ಪ ಏರುಪೇರಾಗಿತ್ತು. ಅಪ್ಪ ಅಲ್ಲಿಲ್ಲಿ ಸಾಲ ಮಾಡಿಕೊಂಡಿದ್ದರೆಂದೆನಿಸುತ್ತೆ. ಆಗಾಗ ಸಾಲಕೊಟ್ಟವರು ನನ್ನನ್ನೋ ನನ್ನ ತಮ್ಮನನ್ನೋ ರಸ್ತೆಯಲ್ಲಿ ನಿಲ್ಲಿಸಿ 'ನಿಮ್ಮಪ್ಪ ಸಿಕ್ಕರೆ ನಮ್ಮಂಗಡಿಗೆ ಬರುವುದಕ್ಕೆ ಹೇಳು' ಎಂದು ಹೇಳುತ್ತಿದ್ದರು. ನಾವು ಹೋಗಿ ಅಪ್ಪನ ಹತ್ತಿರ 'ಅಂಗಡಿ ಶೆಟ್ಟರು ಬರಹೇಳಿದ್ದರು' ಎಂದು ತಲೆತಗ್ಗಿಸಿ ಹೇಳುತ್ತಿದ್ದಾಗ ಅಪ್ಪ ತಮ್ಮ ದರ್ಪವನ್ನು ಬಿಡದೇ 'ಒರ್ತೀನಂತ ಹೇಳು' ಅಂತಲೋ ಅಥವಾ 'ನಾನು ಮಾತಾಡ್ತೀನಿ ಬಿಡು' ಎಂದು ನಮ್ಮ ಕೈಯಲ್ಲಿಯೇ ಮತ್ತೆ ಹೇಳಿ ಕಳಿಸುತ್ತಿದ್ದರು. ಒಳಗೆ ಅಡಿಗೆಮನೆಯಲ್ಲಿ ಅಮ್ಮನ ಕುಸುಕುಸು ಅಳು. ಒಟ್ಟು ಏನೋ ಸರಿಯಿಲ್ಲ ಎಂದು ಅರ್ಥವಾದರೂ ಅದೇನೆಂದು ಪೂರಾ ಗೊತ್ತಾಗುತ್ತಿರಲಿಲ್ಲ. ಇದೇ ಸಂದರ್ಭದಲ್ಲಿ ಅಪ್ಪನ ಒಂದು ಹಳೇ ಡೈರಿ ನನ್ನ ಕೈಗೆ ಸಿಕ್ಕಿತ್ತು. ನಾನು ಅಪ್ಪನ ಕಣ್ಣು ತಪ್ಪಿಸಿ ಅವರ ಡೈರಿಯನ್ನು ತೆಗೆದಿದ್ದೆ. ಅದರಲ್ಲಿ ಮಾಮೂಲಿ ಹಾಲಿನ ಲೆಕ್ಕ, ಕಾಫಿಪುಡಿಲೆಕ್ಕ, ದಿನಸಿ ಲೆಕ್ಕದ ಜತೆಗೆ ಕೊನೆಯಲ್ಲಿ 'ಅಂಬಾಳ ಆಫೀಸರ್ ನಶ್ಯಮೂರುಡಬ್ಬಿ–ಒಂದೂವರೆ ರೂಪಾಯಿ, ಕ್ಲಬ್ಬಿನಲ್ಲಿ ಇಸ್ಪೀಟಾಡಿ ಕಳೆದದ್ದು ಹತ್ತು ರೂಪಾಯಿ' ಎಂಬ ಐಟಮ್ಮೈಜ್ಡ್ ಖರ್ಚುಗಳು ಕೂಡ ಇದ್ದುದನ್ನು ನೋಡಿದಾಗ ಪ್ರಾಮಾಣಿಕತೆಗೆ ಖುಷಿಪಡಬೇಕೋ ಅಥವಾ ಸಾಲ ಮಾಡಿ ಇಸ್ಪೀಟಾಡಿ ದುಡ್ಡು ಸೋತಿರುವ ವಿಷಯವನ್ನೂ ಅಪ್ಪ ರಾಜಾರೋಷವಾಗಿ ಡೈರಿಯಲ್ಲಿ ಬರೆದಿರುವುದನ್ನು ಅಮ್ಮನಿಂದ ಗುಟ್ಟಾಗಿಡಬೇಕೋ ಎಂದು ಗೊತ್ತಾಗದೇ ಒದ್ದಾಡುತ್ತಿದ್ದ ದಿನಗಳು ಎಷ್ಟೋ ಇವೆ. ಎಲ್ಲ ಐಟಂಗಳ ನಂತರ ಒಂದು ಸಣ್ಣ ಮೂರು ಕಾಲಂನ ಟೇಬಲ್ಲಿತ್ತು

| ತೀರಿಸಲೇಬೇಕಾದ ಸಾಲ | ತೀರಿಸಬೇಕಾದ ಸಾಲ | ತೀರಿಸಬಹುದಾದ ಸಾಲ |
|---|---|---|

ಇದನ್ನು ನೋಡಿದಾಗ ನನ್ನ ಮನಸ್ಸು ಅಪ್ಪ ದೊಡ್ಡ ಸಾಲಗಾರನಿರಬಹುದೇನೋ ಎಂದು ವಿಚಲಿತಗೊಂಡರೂ ಅಪ್ಪನ ಆದ್ಯತಾಪಟ್ಟಿಯಲ್ಲಿ 'ತೀರಿಸಬಾರದ ಸಾಲ' ಎನ್ನುವ ಕಾಲಂ ಇಲ್ಲದಿದ್ದನ್ನು ನೋಡಿ ಸಮಾಧಾನಪಟ್ಟಿತ್ತು. ಎಂತೆಂತದಕ್ಕೂ ಲೆಕ್ಕ ಬರೆಯಬಹುದಲ್ಲ ಎಂದು ತುಟಿಯ ಮೇಲೆ ಒಂದು ಸಣ್ಣ ನಗು ಕೂಡ ಮೂಡಿತ್ತು.

ನಾನು ಎಂಬಿಬಿಎಸ್ ಓದಿಗೆಂದು ಕೆನರಾ ಬ್ಯಾಂಕಿನಿಂದ ಸಾಲ ಪಡೆದಿದ್ದೆ. ಮೆಸ್ಸಿನ ಖರ್ಚು, ಕಾಲೇಜು ಫೀಸು ಎಲ್ಲವನ್ನೂ ಮೊದಲು ಕೈಯಿಂದ ಕಟ್ಟಿ ನಂತರ ರಸೀತಿಯನ್ನು ಬ್ಯಾಂಕಿಗೆ ಕಳಿಸಿ ಅದರ ಮೊತ್ತವನ್ನು ಬ್ಯಾಂಕಿನಿಂದ ಪಡೆಯಬೇಕಾಗಿತ್ತು. ಬ್ಯಾಂಕಿನವರು ಪ್ರತಿಯೊಂದು